ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಮತ್ತು ಅವರು ಎತ್ತಿರತಕ್ಕಂಥ ಗಂಭೀರವಾದಂಥ ಒಂದು ವಿಚಾರವಾಗಿದೆ. ಅವರು ಮಹಿಳಾ ಖೈದಿಗಳು ಗರ್ಭಿಣಿಯರಾಗಿದ್ದರು ಎಂಬುದರ ಬಗ್ಗೆ ಹೇಳಿದರು. ಆದರೆ ಮಹಿಳಾ ಖೈದಿಗಳನ್ನು ನೋಡಿಕೊಳ್ಳುವುದಕ್ಕೆ ಮಹಿಳಾ ಸಿಬ್ಬಂದಿ ವರ್ಗದವರಿದ್ದಾರೆಯೇ ಅಥವಾ ಮಹನೀಯರಿದ್ದಾರೆಯೆ?

ಅಧ್ಯಕ್ಷರು : ಮಹಿಳಾ ಸಿಬ್ಬಂದಿ ವರ್ಗದವರಿದ್ದಾರೆ ಎಂದು ಹೇಳಿದರು.

ಶ್ರೀ ಅರಗ ಜ್ಞಾನೇಂದ್ರ : ನಾವೂ ಕೂಡ ಎಮರ್ಜೆನ್ಸಿಯಲ್ಲಿ ಸಾಕಷ್ಟು ತಿಂಗಳುಗಳ ಕಾಲ ಜೈಲಿನಲ್ಲಿ ಕಳೆದಿದ್ದೇವೆ. ಆ ಸಂದರ್ಭದಲ್ಲಿ ಅಲ್ಲಿದ್ದಂಥ ಅನೇಕ ಸಿಬ್ಬಂದಿ ವರ್ಗದವರು ಕ್ರಿಮಿನಲ್ಸ್‌ಗಳ ಜೊತೆಗೆ, ಕಳ್ಳರ ಜೊತೆಗೆ ವ್ಯವಹಾರ ಮಾಡಿ ಮಾಡಿ ಅವರಿಗೂ ಕ್ರಿಮಿನಲ್ ಮೆಂಟಾಲಿಟಿ ಬಂದು ಬಿಟ್ಟದೆ. ಅವರನ್ನು ಸರಿಪಡಿಸುವ ದಿಕ್ಕಿನಲ್ಲಿ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ? ಮೊದಲು ಅವರು ಸರಿಯಾದರೆ ಆಮೇಲೆ ಖೈದಿಗಳೆಲ್ಲರೂ ಸರಿಯಾಗುತ್ತಾರೆ.

ಅಧ್ಯಕ್ಷರು : ಕ್ರಿಮಿನಲ್ ಮೆಂಟಾಲಿಟಿ ಇರುವವರು ಎಲ್ಲಾ ಕಡೆಯಲ್ಲೂ ಕೂಡ ಇರಬಹುದು.

ಶ್ರೀ ವಿ. ಸೋಮಣ್ಣ : ಮಹಿಳೆಯರನ್ನು ನೋಡಿಕೊಳ್ಳುವುದಕ್ಕೆ ಮಹಿಳಾ ವೀಕ್ಷಕರನ್ನು, ಪರಿವೀಕ್ಷಕರನ್ನು ನೇಮಕ ಮಾಡಿದ್ದೇವೆ. ಅವರು ಹೇಳಿದಂಥ ಅಧಿಕಾರಿಗಳೇನಿದ್ದಾರೆ ಅಂಥವರ ಮೇಲೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಕೆಲವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ ಮತ್ತೆ ಕೆಲವರನ್ನು ವಿಚಾರಣೆಗೆ ಗುರಿಪಡಿಸಿದ್ದೇವೆ. ಜೊತೆಗೆ ವಾರಕ್ಕೊಂದು ಸಲವಾದರೂ ಒಂದಲ್ಲ ಒಂದು ಕಾರಾಗೃಹಕ್ಕೆ ಭೇಟಿ ನೀಡುತ್ತಿದ್ದೇನೆ. ಆದುದರಿಂದ ಅಲ್ಲಿ ಅಲ್ಪಸ್ವಲ್ಪ ಸುಧಾರಣೆಯಾಗಿದೆ. ಆದರೆ ಎಲ್ಲವನ್ನೂ ಸುಧಾರಣೆ ಮಾಡಿದ್ದೇನೆ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಹೆಣ್ಣುಮಕ್ಕಳು, ಇರುವಂಥ ಕಾರಾಗೃಹಗಳ ಬಗ್ಗೆ ಹೆಚ್ಚಿನ ಗಮನ ಇಡುತ್ತಿದ್ದೇವೆ. ಅಲ್ಲದೆ ಟೈಲರಿಂಗ್, ನಿಟ್ಟಿಂಗ್ ಈ ಕೆಲಸಗಳನ್ನು ಅವರಿಂದ ಮಾಡಿಸುತ್ತಿದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಹಂತಹಂತವಾಗಿ ಮಾಡಿಕೊಂಡು ಬರುತ್ತಿದ್ದೇವೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ತಕ್ಷಣವೇ ನಮ್ಮ ಇಬ್ಬರು, ಮೂವರು ಅಧಿಕಾರಿಗಳನ್ನು ದೆಹಲಿಗೆ ಕಳುಹಿಸಿ ಹಂತಹಂತವಾಗಿ ಕ್ರಮ ಕೈಗೊಳ್ಳುತ್ತೇವೆ. ನಾನು ಈಗಾಗಲೇ ಶ್ರೀಮತಿ ಕಿರಣ್‌ಬೇಡಿಯವರನ್ನು ಭೇಟಿ ಬಂದಿದ್ದೇನೆ. ಆದುದರಿಂದ ತಾವು ಹೇಳಿರುವಂಥ ಉಪಯುಕ್ತ ಸಲಹೆಯನ್ನು ನಾವು ಪರಿಶೀಲನೆ ಮಾಡುತ್ತೇವೆ.

ಹಾರಂಗಿ ಜಲಾಶಯದ ವ್ಯಾಪ್ತಿಯಲ್ಲಿ ಬರುವ ಶೀತಲ ಪ್ರದೇಶದ ಗ್ರಾಮಗಳು

457 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನ ಕುಶಾಲನಗರದ ಹಾರಂಗಿ ಜಲಾಶಯದ ವ್ಯಾಪ್ತಿಯಲ್ಲಿ ಬರುವ ಯಾವ ಯಾವ ಗ್ರಾಮಗಳನ್ನು ಶೀತಲ ಪ್ರದೇಶ ಹಳ್ಳಿಗಳೆಂದು ಗುರುತಿಸಲಾಗಿದೆ?

ಅ) ಆ ಶೀತಲ ಗ್ರಾಮದ ಜನರಿಗೆ ಪುನರ್ ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆಯೇ?

ಇ) ಇಲ್ಲದಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಹಾರಂಗಿ ಜಲಾಶಯದ ವ್ಯಾಪ್ತಿಯಲ್ಲಿ ಬರುವ 15 ಗ್ರಾಮಗಳನ್ನು ಶೀತ ಪೀಡಿತ ಪ್ರದೇಶಗಳಿಂದು ಗುರುತಿಸಲಾಗಿದೆ. ಅವುಗಳಿಂದರೆ;

1. ಬಂಡಳ್ಳಿ ಹರಿಜನ ಕಾಲೋನಿ 2. ಸಾಲೆಕೊಪ್ಪಲು 3. ಬಸವನಹಳ್ಳಿ
4. ಚಾಮರಾಯನಕೋಟೆ 5. ಕಣಿವೆ 6. ಭುವನಗಿರಿ ಹರಿಜನ ಕಾಲೋನಿ
7. ಬಸವಾಪಟ್ಟಣ ಹರಿಜನ ಕಾಲೋನಿ 8. ಹನ್ಯಾಳ 9. ಮತ್ತೀಗೋಡು
10. ಗೊಬ್ಬಿ 11. ಹೊಸಹಳ್ಳಿ 12. ನಿಲುವಾಗಿಲು 13. ಕೆರಗಲ ಕೊಪ್ಪಲು
14. ರುದ್ರಪಟ್ಟಣ 15. ಅಬ್ಬೂರು.

ಆ) ಉದ್ದೇಶಿಸಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವೊಂದು ಊರುಗಳು ಶೀತಪ್ರದೇಶವೆಂದು ಮಾಡಿರುವ ಪಟ್ಟಿಯಲ್ಲಿ ಬಿಟ್ಟುಹೋಗಿದೆ. ನನ್ನ ಉಪಪ್ರಶ್ನೆ ಏನೆಂದರೆ ಹಾರಂಗಿ ಜಲಾಶಯದ ಕೆಲಸ ಯಾವ ಇಸವಿಯಲ್ಲಿ ಪೂರ್ಣಗೊಂಡಿತು ಮತ್ತು ಇದರಿಂದ ಎಷ್ಟು ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ ಹಾಗೂ ಅಲ್ಲಿ ಎಷ್ಟು ಎಕರೆ ಪ್ರದೇಶ ಮುಳುಗಡೆಯಾಗಿದೆ ಎಂಬ ಬಗ್ಗೆ ಮಾಹಿತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ವಿಚಾರ ಏನೆಂದರೆ ಎಷ್ಟು ಗ್ರಾಮಗಳು ಶೀತಪೀಡಿತವಾಗಿದೆ ಎಂಬುದು.15 ಗ್ರಾಮಗಳು ಶೀತಪೀಡಿತ ಪ್ರದೇಶ ಗ್ರಾಮಗಳಾಗಿವೆ. ಅದರಲ್ಲಿ 8 ಗ್ರಾಮಗಳನ್ನು ಈಗಾಗಲೇ ನಾವು ಎಸ್ಟಿಮೇಟ್ ಮಾಡಿದ್ದೇವೆ. 4 ಗ್ರಾಮಗಳಿಗೆ 26 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ ಕೆಲವು ಕಡೆ ಕೆಲಸ ಪ್ರಾರಂಭವಾಗಿದೆ. ಇನ್ನೂ ಸುಮಾರು ಗ್ರಾಮಗಳು ಎಸ್ಟಿಮೇಟ್ ಸ್ಟೇಜ್‌ನಲ್ಲಿವೆ. ಡಿವಿಜನಲ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಆ ಕಮಿಟಿಯವರು ಮೀಟಿಂಗ್ ಮಾಡಿ ರೆಕಮೆಂಡೇಷನ್ಸ್ ಮಾಡಿದ್ದಾರೆ. ಅದರಲ್ಲಿ ಕ್ಯಾಟಗರಿ ಎ,ಬಿ ಸಿ ಎಂದು ಮಾಡಿದ್ದಾರೆ. ಅದರ ಪ್ರಕಾರ ಯಾವ ಯಾವ ಗ್ರಾಮಗಳನ್ನು ತೆಗೆದುಕೊಳ್ಳ -ಬೇಕೆಂದು ತೀರ್ಮಾನ ಮಾಡಿ 1992-93ರಲ್ಲಿ 11 ಗ್ರಾಮಗಳನ್ನೂ ಹಾಗೂ 1996-97ರಲ್ಲಿ 4 ಗ್ರಾಮಗಳನ್ನು ಸೇರಿಸಿದ್ದಾರೆ. ಇನ್ನೂ ಯಾವುದಾದರೂ ಗ್ರಾಮ ಬಿಟ್ಟುಹೋಗಿದ್ದರೆ ಅಥವಾ ತಮಗೆ ಅದು ಶೀತ ಪ್ರದೇಶ ಎನ್ನುವುದು ಗೊತ್ತಾದರೆ ಈ ಕಮಿಟಿಯವರು ಶಿಫಾರಸ್ಸು ಮಾಡದಿದ್ದರೂ ಸಹ

ಅದನ್ನು ಮತ್ತೆ ಪರಿಶೀಲನೆ ಮಾಡಿಸುವುದಕ್ಕೆ ಡಿವಿಜನಲ್ ಕಮಿಷನರ್ ಅಧ್ಯಕ್ಷರಾಗಿರುವಂಥ ಕಮಿಟಿಗೆ ಕಳುಹಿಸಿಕೊಡುತ್ತೇವೆ. ಆದಷ್ಟು ಬೇಗ ಈ ಕಾರ್ಯಕ್ರಮವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

10.40 ಎ.ಎಂ

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಆ ಅಣೆಕಟ್ಟು ಸುಮಾರು 15 ವರ್ಷಗಳ ಹಿಂದೆ ಪೂರ್ಣವಾಗಿದ್ದರೂ ಕೂಡ ಈ ಶೀತಲ ಪ್ರದೇಶದವರಿಗೆ ಇನ್ನೂ ಪರಿಹಾರ ಕೊಡಲಿಲ್ಲ, ಶಿಫ್ಟ್ ಮಾಡಲಿಲ್ಲ ಎಂದರೆ ಇನ್ನೂ ಎಷ್ಟು ವರ್ಷ ಬೇಕು? ದಯವಿಟ್ಟು ತಾವು ತ್ವರಿತವಾಗಿ ಪ್ರದೇಶವನ್ನು ಶಿಫ್ಟ್ ಮಾಡಬೇಕು ಮತ್ತು ಅವರಿಗೆ ವಸತಿಯನ್ನು ಕೊಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದನ್ನು ಬೇಗನೆ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಅದು ನಿಜ ಇದೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ 310ಕೋಟಿ ರೂಪಾಯಿ ಖರ್ಚು ಮಾಡಿ ನಾವು 40819ಹೆಕ್ಟೇರ್ ನೀರು ಕೊಟ್ಟಿದ್ದೇವೆ. ಆದರೆ ಇದನ್ನು ಅವರು ಗಮನ ಹರಿಸಿಲ್ಲ. ಆ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ. ಡಿವಿಜನಲ್ ಕಮಿಷನರ್ ಅವರಿಗೆ ಈ ಕೂಡಲೇ ಆದೇಶವನ್ನು ಕೊಡುತ್ತೇನೆ. ನಮ್ಮ ಡಿಪಾರ್ಟ್‌ಮೆಂಟಿಗೆ ಆದೇಶ ಕೊಡುತ್ತೇನೆ. ಎಸ್ಟಿಮೇಟ್ ಮಾಡಿ, ಒಂದು, ಒಂದೂವರೆ ವರ್ಷದಲ್ಲಿ ಸಂಪೂರ್ಣವಾಗಿ 15ಗ್ರಾಮಗಳಿಗೂ ಪುನರ್ ವ್ಯವಸ್ಥೆ ಮಾಡತಕ್ಕಂಥ ಕೆಲಸವನ್ನು ಮುಗಿಸಬೇಕು ಎನ್ನತಕ್ಕ ಸ್ಪಷ್ಟ ಆದೇಶವನ್ನು ನಾವು ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಬೇಗನೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಎನ್. ನಾಗೇಗೌಡ : ಆಗಬಹುದು.

ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸಿನಲ್ಲಿ 33 ಕೆ.ವ್ಹಾ ವಿದ್ಯುತ್ ಸ್ಟೇಷನ್

458 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸ್‌ನಲ್ಲಿ 33 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ಯಾವಾಗ ನೀಡಲಾಗಿದೆ?

ಆ) ಹಾಗಿದ್ದಲ್ಲಿ 1997-98ರಲ್ಲಿ ಈ ಯೋಜನೆಗೆ ಎಷ್ಟು ಮೊತ್ತದ ಅನುದಾನ ಒದಗಿಸಲಾಗುತ್ತಿದೆ?

ಇ) ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಅಂತಿಮ ಸ್ವರೂಪ ನೀಡಲಾಗುವುದು?